ದಿನಾಂಕಃ **19-03-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ವಾದಿ ಪರ ವಕೀಲರಿಂದ,</u>**

1) ನಾನು ಪಿಯುಸಿ ವ್ಯಾಸಂಗ ಮಾಡಿರುತ್ತೇನೆ. ನಾನು ವ್ಯವಸಾಯ ಮಾಡುತ್ತೇನೆ. ನನ್ನ ತಂದೆ ನಂಜೇಗೌಡರಿಗೆ ದಾವಾ ಸ್ವತ್ತು ಹೊರತುಪಡಿಸಿ ಇತರೆ ಒಟ್ಟು ಕುಟುಂಬದ ಆಸ್ತಿಗಳು ಯಾವ ರೀತಿ ಬಂದಿದ್ದು ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಹೊರತುಪಡಿಸಿ ನಮ್ಮ ಕುಟುಂಬಕ್ಕೆ ಇತರೆ ಆಸ್ತಿಗಳು ಇರುವ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆ 2007 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಂದೆ ತೀರಿಕೊಂಡ ನಂತರ ನಮ್ಮ ಕುಟುಂಬದ ವ್ಯವಹಾರಗಳನ್ನು ನನ್ನ ತಾಯಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನನ್ನ ಇತರೆ ಸಹೋದರರೂ ಸಹ ವ್ಯವಸಾಯ ಮಾಡುತ್ತಾರೆ. ನಮ್ಮ ಕುಟುಂಬದ ವ್ಯವಹಾರಗಳನ್ನು ನಾನು ಮತ್ತು ನನ್ನ ತಾಯಿ ನೋಡಿಕೊಳ್ಳುತ್ತೇವೆ ಎಂದರೆ ಸರಿಯಲ್ಲ.

2) ನಿಪಿ 1 ಕರಾರು ಪತ್ರವನ್ನು ನಾನು ಮಾಡಿಕೊಟ್ಟಿರುತ್ತೇನೆ ಎಂದರೆ ಸಾಕ್ಷಿಯು ಸಾಲದ ಭದ್ರತೆಗೆ ಬರೆದುಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ 1 ಕರಾರು ಪತ್ರದಲ್ಲಿ ಸಾಲದ ಭದ್ರತೆಗಾಗಿ ಕರಾರು ಪತ್ರ ಬರೆದುಕೊಟ್ಟಿರುತ್ತೇವೆ ಎಂದು ಒಕ್ಕಣಿಕೆ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 1 ಕರಾರು ಪತ್ರದಡಿಯಲ್ಲಿ ವಾದಿ ನನಗೆ ಮತ್ತು ನನ್ನ ತಾಯಿಗೆ 14 ಲಕ್ಷ ಮುಂಗಡ ಹಣವನ್ನು ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಾದಿ ಕೇವಲ ಐದು ಲಕ್ಷ ಪಾವತಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಕರಾರು ಪತ್ರದ ಜೊತೆಯಲ್ಲಿ ನಾನು ವಾದಿಗೆ ಎರಡು ಚೆಕ್ಕುಗಳನ್ನು ನೀಡಿರುತ್ತೇನೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ನಿಪಿ 1 ಕರಾರು ಪತ್ರವನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ನಿಪಿ 1 ಕರಾರು ಪತ್ರಕ್ಕೆ ನನ್ನ ಸ್ನೇಹಿತರಾದ ಪ್ರಭಾಕರ್ ಮತ್ತು

ಜಗದೀಶ್ ರವರು ಸಹಿ ಹಾಕಿರುತ್ತಾರೆ ಎಂದರೆ ಸರಿ, ಸಾಕ್ಷಿ ಪುನಃ ನುಡಿಯುತ್ತಾರೆ ಸದರಿ ಪ್ರಭಾಕರ್ ಮತ್ತು ಜಗದೀಶ್ ರವರು ವಾದಿ ಸ್ನೇಹಿತರು ಎಂದು ನುಡಿಯುತ್ತಾರೆ. ವಾದಿ ಬೆಂಗಳೂರಿನಲ್ಲಿ ವಾಸವಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ 1 ಕರಾರು ಪತ್ರದಲ್ಲಿರುವ ಸಾಕ್ಷಿದಾರರು ನನ್ನ ಸ್ನೇಹಿತರು ಎಂದರೆ ಸರಿಯಲ್ಲ.

3) ನಿಪಿ 1 ಕರಾರು ಪತ್ರ ಆಗುವ ಪೂರ್ವದಲ್ಲಿ ದಾವಾ ಸ್ವತ್ತಿನ ಖಾತೆ ನನ್ನ ತಾಯಿ ಹೆಸರಿನಲ್ಲಿ ಇತ್ತು ಎಂದರೆ ಸರಿ. ನಾನು ಮತ್ತು ನನ್ನ ತಾಯಿ ನಿಪಿ 1 ಕರಾರು ಪತ್ರದಂತೆ ನೊಂದಣಿ ಮಾಡಿಕೊಡದೇ ಇರುವಾಗ ವಾದಿ ನಿಪಿ 5 ರಂತೆ ನನಗೆ ಮತ್ತು ನನ್ನ ತಾಯಿಗೆ ವಕೀಲರ ಮುಖಾಂತರ ತಿಳುವಳಿಕೆ ಪತ್ರ ಕಳುಹಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ 5 ತಿಳುವಳಿಕೆ ಪತ್ರ ನನಗೆ ಜಾರಿಯಾಗಿರುತ್ತದೆ ಎಂದರೆ ಸಾಕ್ಷಿಯು ತಲುಪಿರುತ್ತದೆ ಮತ್ತು ಮರೆತು ಹೋಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ತಂದೆ ತೀರಿಕೊಂಡ ನಂತರ ದಾವಾ ಸ್ವತ್ತಿನ ಖಾತೆ ನನ್ನ ತಾಯಿ ಮತ್ತು ಅವರ ಮಕ್ಕಳ ಹೆಸರಿಗೆ ಜಂಟಿ ಖಾತೆ ಆಗಿರುತ್ತದೆ ಎಂದರೆ ಸರಿ. ದಾವಾ ಸ್ವತ್ತನ್ನು ವಾದಿಗೆ ಮೋಸ ಮಾಡಬೇಕೆಂಬ ಉದ್ದೇಶದಿಂದ 4 ನೇ ಪ್ರತಿವಾದಿಗೆ ಹಕ್ಕು ಬಿಡುಗಡೆ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ 12 ರಂತೆ ಗೋವಿಂದೇಗೌಡರವರ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸರಿ.

4) ನನ್ನ ಲಿಖಿತ ತಕರಾರಿನಲ್ಲಿ ತಿಳಿಸಿರುವ ಅಡಕಗಳ ಬಗ್ಗೆ ನನಗೆ ಗೊತ್ತಿರುತ್ತದೆ. ನನ್ನ ತಕರಾರಿನಲ್ಲಿ ತಿಳಿಸಿರುವಂತೆ ವಾದಿಗೆ ಎರಡು ಚೆಕ್ಕುಗಳನ್ನು ನೀಡಿದ ಬಗ್ಗೆ ಲಿಖಿತ ರೂಪದಲ್ಲಿ ದಾಖಲೆ ಇರುವುದಿಲ್ಲ. ನಾನು ವಾದಿಗೆ ಚೆಕ್ಕು ಸಂಖ್ಯೆ 168691 ಮತ್ತು 168692 ಸಹಿ ಮಾಡಿದ ಖಾಲಿ ಚೆಕ್ಕುಗಳನ್ನು ನೀಡಿರುತ್ತೇನೆ. ಸದರಿ ಚೆಕ್ಕುಗಳನ್ನು ನಗದೀಕರಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ವಾದಿ ಕಳುಹಿಸಿರುವ ತಿಳುವಳಿಕೆ ಪತ್ರಕ್ಕೆ ಪ್ರತ್ಯುತ್ತರ ನೀಡಿದ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ವಾದಿ ಯಾರು ಎಂದು ಗೊತ್ತಿರುವುದಿಲ್ಲ ಕಾರಣ ಅವರ ವಿರುದ್ಧ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ನನ್ನ ತಕರಾರಿನಲ್ಲಿ ವಾದಿ ಗೊತ್ತಿಲ್ಲ ಎಂದು ನಮೂದು ಮಾಡಿರುವುದಿಲ್ಲ. ನಿಪಿ 1 ಕರಾರು ಪತ್ರದಲ್ಲಿ ಎರಡು ಚೆಕ್ಕುಗಳನ್ನು ನೀಡಿದ ಬಗ್ಗೆ

ಮತ್ತು ಸಾಲದ ಭದ್ರತೆಗಾಗಿ ಕರಾರು ಪತ್ರ ಬರೆದುಕೊಟ್ಟಿರುವುದಾಗಿ ನಮೂದು ಇರುವುದಿಲ್ಲ.

5) ನಾನು ಮತ್ತು ನನ್ನ ತಾಯಿ ಕುಟುಂಬದ ಪರವಾಗಿ ವಾದಿ ಹೆಸರಿಗೆ ಕರಾರು ಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಸರ್ವೆ ನಂ. 111/9 ರಲ್ಲಿ ಗೋವಿಂದೇಗೌಡರಿಗೆ ನಾಲ್ಕು ಎಕರೆ 20 ಗುಂಟೆ ಆಸ್ತಿ ಇದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಕುಟುಂಬಕ್ಕೆ ಸರ್ವೆ ನಂ. 110/1 ರಲ್ಲಿ ಆಸ್ತಿ ಇದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಕುಟುಂಬಕ್ಕೆ ಸರ್ವೆ ನಂ. 03/1 ರಲ್ಲಿ ಆಸ್ತಿ ಇದೆ ಎಂದರೆ ನನಗೆ ಗೊತ್ತಿಲ್ಲ. ನಾನು ಮುಂಜನಹಳ್ಳಿ ಗ್ರಾಮ ಪಂಚಾಯ್ತಿ ಸದಸ್ಯನಾಗಿದ್ದೆ ಮತ್ತು ಎರಡು ಬಾರಿ ಅಧ್ಯಕ್ಷನಾಗಿದ್ದೆ ಎಂದರೆ ಸರಿ. 4 ನೇ ಪ್ರತಿವಾದಿ ಸಹ ಗ್ರಾಮ ಪಂಚಾಯ್ತಿ ಸದಸ್ಯರಾಗಿದ್ದರು ಎಂದರೆ ಸರಿ. ನನ್ನ ಪತ್ನಿ ಹಾಲಿ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿದ್ದಾರೆ ಎಂದರೆ ಸರಿ. ನಮ್ಮ ಕುಟುಂಬದ ಸದಸ್ಯರು ಅಕ್ಷರಸ್ಥರಾಗಿರುತ್ತಾರೆ ಎಂದರೆ ಸರಿ. ವಾದಿಗೆ ಮೋಸ ಮಾಡಬೇಕೆಂದು ಸುಳ್ಳು ತಕರಾರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

6) ದಾವಾ ಆಸ್ತಿಯನ್ನು ಅಡಮಾನ ಮಾಡಿ ಕರ್ನಾಟಕ ಗ್ರಾಮೀಣ ಬ್ಯಾಂಕಿನಲ್ಲಿ ಸಾಲ ಪಡೆದಿರುತ್ತೇವೆ ಎಂದರೆ ಸರಿ. ಸದರಿ ಬ್ಯಾಂಕಿನಲ್ಲಿ ನಾವು ಸುಸ್ತಿದಾರನಾಗಿರುತ್ತೇವೆ ಎಂದರೆ ಸರಿ. ಸದರಿ ಸಾಲ ಇನ್ನೂ ಬಾಕಿ ಇರುತ್ತದೆ. ವಾದಿಗೆ ಕರಾರು ಪತ್ರ ಬರೆದುಕೊಟ್ಟಿದ್ದರೂ ಸಹ ಕರಾರು ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲು ವಿಚಾರಣೆಗೆ ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾಧಂ., ಕೆ.ಆರ್.ನಗರ.